ಮುಂಪಂಕ್ತಿಯ ಎರಡು ಹಲ್ಲುಗಳು ಅಲ್ಲಿಯೇ ಉದುರಿ ಬಿದ್ದಿದ್ದವು! ಆಶ್ಚರ್ಯವೆಂದರೆ, ಆತ ಜೋರಾಗಿ ಅಳುತ್ತಿದ್ದರೂ, ಆತನ ಬಾಯಿಯಿಂದ ರಕ್ತ ಸೋರುತ್ತಿದ್ದರೂ ನನಗೆ ಆತನ ಬಗ್ಗೆ ಒಂದಿಷ್ಟೂ ಸಹಾನುಭೂತಿ ಮೂಡಿರಲಿಲ್ಲ!

ನನ್ನ ಅವ್ವನಿಗೆ ಇಟ್ಟಿಗೆ ಭಟ್ಟಿಯ ಯುವರಾಜನ ಬಗ್ಗೆ ಅತ್ಯಂತ ಅನುಕಂಪ ಮೂಡಿತ್ತು. ಆಕೆ ಕಾವ್ಯಾಳನ್ನು ಕೇಳುತ್ತಿದ್ದಳು, ''ಬರೀ ಭೇದಿನಾ ಇಲ್ಲಾ ಬೇರೇನಾರ ತೊಂದ್ರಿ ಐತಿ?''

''ಇಲ್ಲ... ಮತ್ತೇನೂ ತೊಂದರೆ ಇಲ್ಲಾರೀ...''

ಕಾವ್ಯಾ ಸಂಕೋಚದಿಂದ ನಿಧಾನವಾಗಿ ಈ ಮಾತುಗಳನ್ನು ಆಡುತ್ತಿದ್ದರೆ, ನಾನು ಎರಡೂ ತುಟಿಗಳನ್ನು ಒತ್ತಿಹಿಡಿದುಕೊಂಡು, ಉಕ್ಕಿಬರುತ್ತಿದ್ದ ನಗುವನ್ನು ತಡೆಹಿಡಿಯುವ ಪ್ರಯತ್ನ ನಡೆಸಿದ್ದೆ. ಮನಸ್ಸಿನಲ್ಲಿಯೇ ಶಾಯರಿಯೊಂದು ಸುಳಿದುಹೋಯಿತು, 'ಕಹತೇ ಹೈ ಜಿಸ್ಕೋ ಇಶ್ಕ್, ಖಲಲ್ ಹೈ ದಿಮಾಗ್ ಕಾ...' (ಯಾವುದನ್ನು ನಾವು ಪ್ರೇಮವೆಂದು ಕರೆಯುತ್ತೇವೆಯೋ ಅದು ಮಿದುಳಿನ ಅಸಹಜತೆ ಅಥವಾ ಗೊಂದಲದ ಸ್ಥಿತಿ ಮಾತ್ರ)

ಅವ್ವನಿಗೆ ಏನನ್ನಿಸಿತೋ, ಇದಕ್ಕೆಲ್ಲಾ ಕಾರಣ ಪ್ರಕೃತಿಯಲ್ಲಿನ ಬದಲಾವಣೆ ಎನ್ನುವ ಅಂತಿಮ ತೀರ್ಪನ್ನು ನೀಡಿದಳು. ''ಹವಾ ಭಾಳ ಖರಾಬ್ ಆಗ್ಯೈತ್ರಿ... ಹಗ್ಲೂ ರಾತ್ರೀ ಸೆಕಿ ಬಾಳ ಐತಿ... ನನಗನ್ನಿಸ್ತದ, ಇವ್ಗ ಗರ್ಮೀ ಆಗ್ಯೆತಿ... ಮತ್ತೇನೂ ಇಲ್ಲ. ಮತ್ತೇನೂ ಮಾಡೋದ್ ಬ್ಯಾಡ... ದಿನದಾಗ ಮೂರ್ನಾಲ್ಕ್ ಸಲ 'ದೂಧ್ ಸೋಡಾ' ಕೊಡು... ಎಲ್ಲಾ ಸರಿ ಹೋಕ್ಕೈತಿ... ನಾನಂತೂ

